ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃರವರ
ನ್ಯಾಯಾಲಯದಲ್ಲಿ, ನ.ರಾ.ಪುರ.
ಸಿಸಿ ನಂ **89/2025**

ಸಿ ಡಬ್ಲ್ಯೂಃ– **09**/ಪಿ ಡಬ್ಲ್ಯೂ ಃ-**09**

| | |
|---|---|
| ಸಾಕ್ಷಿದಾರರ ಹೆಸರು | ಃ ಬಿನು |
| ತಂದೆಯ ಹೆಸರು | ಃ ಎಲಿಯಾಸ್ |
| ವಯಸ್ಸು | ಃ 42 ವರ್ಷ |
| ಉದ್ಯೋಗ | ಃ ಡ್ರೈವರ್ |
| ವಾಸಸ್ಥಳ | ಃ ಕಣಬೂರು, ಎನ್ ಆರ್ ಪುರ ತಾಲೂಕು |

ದಿನಾಂಕಃ **23-06-2026** ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಮಾಡಿಸಲಾಯಿತು.

ಮುಖ್ಯವಿಚಾರಣೆ ಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

1. ಚಾಸಾ 1 ನನ್ನ ತಮ್ಮನಾಗಬೇಕು. ಚಾಸಾ-2 ರಿಂದ ಚಾಸಾ-8 ರವರ ಪರಿಚಯ ಇರುತ್ತದೆ. ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ. ಪೋಲಿಸರು ನನ್ನನ್ನು ವಿಚಾರಣೆ ಮಾಡಿ ಯಾವುದೇ ಹೇಳಿಕೆಯನ್ನು ಪಡೆದುಕೊಂಡಿರುವುದಿಲ್ಲ.

   (ಈ ಹಂತದಲ್ಲಿ ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಬೇಕೆಂದು ಸಹಾಯಕ ಸರ್ಕಾರಿ ಅಭಿಯೋಜಕರು ಕೋರಿಕೊಂಡಿದ್ದು, ಪರಿಗಣಿಸಿ ಅನುಮತಿ ನೀಡಲಾಯಿತು)

ಪಾಟೀ ಸವಾಲುಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

1. ದಿಃ 03.07.2025 ರಂದು ನಾನು ಘಟನೆಗೆ ಸಂಬಂಧಿಸಿಂತೆ ದಿಃ 22.06.2025 ರಂದು ಮದ್ಯಾಹ್ನ 4.00 ಗಂಟೆ ಸುಮಾರಿಗೆ ನಾನು ಮನೆಯಲ್ಲಿದ್ದಾಗ ನನ್ನ ತಮ್ಮನಾದ ಚಾಸಾ-1 ರವರು ಪೋನ್ ಮಾಡಿ ತಾನು ಕಣಬೂರು ಗೇಟ್ ಬಳಿ ಇದ್ದಾಗ ನನಗೆ ಪರಿಚಯ ಇರುವ ಸೌತಿಕೆರೆ ಸತೀಶ ರವರು ಪೋನ್ ಮಾಡಿ ಎನ್ ಆರ್ ಪುರದ ಕನ್ಯಾಕುಮಾರಿ ಹೋಟೇಲ್ ಹತ್ತಿರ ಚಾಸಾ-6 ರವರಿಗೆ ಸಂಬಂಧಿಸಿದ ಓಮಿನಿ ಕಾರ್ ಸಂಖ್ಯೆ KA 14 N 3381 ವಾಹನಕ್ಕೆ ಒಂದು ಬೊಲೆರೋ ಪಿಕ್ ಅಪ್ ವಾಹನ ಅಪಘಾತ ಮಾಡಿ ವಾಹನ ನಿಲ್ಲಿಸದೇ ಶಿವಮೊಗ್ಗದ ಕಡೆಗೆ ಹೋಗುತ್ತಿದ್ದಾನೆ ನೀನು ಮುತ್ತಿನಕೊಪ್ಪದಲ್ಲಿದ್ದರೆ ಸದರಿ ವಾಹನವನ್ನು ನಿಲ್ಲಿಸುವಂತೆ ಹೇಳಿದರು ಎಂದರೆ ಸರಿಯಲ್ಲ. ತಾವು ಮುತ್ತಿನಕೊಪ್ಪಕ್ಕೆ ಬೈಕ್ ನಲ್ಲಿ ಬರುತ್ತಿರುವಾಗ ಪಜೆರೋ ಹೋಟೇಲ್ ಬಳಿ ಬೊಲೆರೋ ಪಿಕ್ ಅಪ್ ವಾಹನ ನಿಂತಿದ್ದು, ಅದರ ಹಿಂಭಾಗದಲ್ಲಿ ಕುರುಬರ ರಾಣಿ ಎಂದು ಬರೆದಿದ್ದು, ಸದರಿ ವಾಹನದಲ್ಲಿದ್ದವರನ್ನು ವಿಚಾರಣೆ ಮಾಡಲಾಗಿ ಸದರಿಯವರು ಊಟ ಮಾಡುತ್ತಿದ್ದು ನಂತರ ಅವರನ್ನು ಓಮಿನಿ ಕಾರ್ ಗೆ ಅಪಘಾತ ಮಾಡಿದ ಬಗ್ಗೆ ಕೇಳಿದ್ದಕ್ಕೆ ಹೌದು ಎಂದು ಹೇಳಿದರು ಎಂದರೆ ಸರಿಯಲ್ಲ. ಆಗ ಮದ್ಯಾಹ್ನ 3.30 ಗಂಟೆ ಆಗಿದ್ದು, ಸ್ವಲ್ಪ ಹೊತ್ತು ಇಲ್ಲೇ ಇರಿ ಎಂದು ಹೇಳಿದ್ದಕ್ಕೆ ಅವರು ಆಯಿತು ಎಂದು ಹೇಳಿ ಹೊಟೇಲ್ ನಿಂದ ಹೊರಗೆ ಬಂದು ಬುಲೆರೋ ವಾಹನವನ್ನು

ಸ್ಟಾರ್ಟ ಮಾಡಿದ್ದು ಅದನ್ನು ನಿಲ್ಲಿಸುವಂತೆ ಚಾಸಾ-1 ರವರು ಹೇಳಿದಾಗ ಸದರಿ ಚಾಲಕನ ಪಕ್ಕದಲ್ಲಿದ್ದ ವ್ಯಕ್ತಿ ಅವರ ಬಲಗೈಯ್ಯನ್ನು ಹಿಡಿದು ಎಳೆದುಕೊಂಡು ಕೈಯನ್ನು ಕಚ್ಚುತ್ತಾ ವಾಹನ ಚಾಲನೆ ಮಾಡಿಕೊಂಡು ಹೋಗುತ್ತಿದ್ದರು ಎಂದರೆ ಸರಿಯಲ್ಲ. ನಂತರ ಆ ವಾಹನದ ಪೂಟ್ ರೆಸ್ಟ್ ಮೇಲೆ ನಿಂತಿಕೊಂಡಿದ್ದು ಅದರ ಚಾಲಕನು ವಾಹನವನ್ನು ನಿಲ್ಲಿಸದೇ ಉಂಬಳೆಬೈಲಿನಿಂದ ಭದ್ರಾವತಿ ಕಡೆಗೆ ತಮ್ಮನ್ನು ಕರೆದುಕೊಂಡು ಹೋಗುತ್ತಿರುವುದಾಗಿ ನನಗೆ ತಿಳಿಸಿದರು ಎಂದರೆ ಸರಿಯಲ್ಲ. ನಾನು ತಕ್ಷಣ ಪೋನ್ ಸಂಪರ್ಕದಲ್ಲಿದ್ದು ಆತನು ಕಳುಹಿಸಿದ್ದ ಲೊಕೇಶನ್ ಗೆ ನಾನು ಹೋಗುವಷ್ಟರಲ್ಲಿ ಆತನನ್ನು ಭದ್ರಾವತಿಯ ಕಾರೆಹಳ್ಳಿ ಪ್ಲೈ ಓವರ್ ಬ್ರಿಡ್ಜ್ ಕೆಳಗೆ ಕರೆದುಕೊಂಡು ಹೊಡೆದು ಹೋಗಿರುತ್ತಾರೆ ಎಂದರೆ ಸರಿಯಲ್ಲ. ನಂತರ ನಾನು ನನ್ನ ತಮ್ಮನನ್ನು ಮನೆಗೆ ಕರೆದುಕೊಂಡು ಬಂದಿರುತ್ತೇನೆ ಎಂದರೆ ಸರಿಯಲ್ಲ. ಆ ಸಂಬಂಧ ನಾನು ಈಗ ಓದಿ ಹೇಳಿದ ನಿಪಿ-15 ರಂತೆ ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ನಾವು ಮತ್ತು ಆರೋಪಿತರು ರಾಜಿ ಮಾಡಿಕೊಂಡ ಕಾರಣ ನಾನು ಪೋಲಿಸರ ಮುಂದೆ ಯಾವುದೇ ಹೇಳಿಕೆ ಕೊಟ್ಟಿರುವುದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿತರ ಪರ ವಕೀಲರು ತಮ್ಮ ಪರ ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.

ಮರು ವಿಚಾರಣೆ ಃ ಇಲ್ಲ ಃ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ

ಸಹಿ/-

ಹಿರಿಯ ಸಿವಿಲ್ ನ್ಯಾಯಾಧೀಶರುಃ ನ.ರಾ.ಪುರ.

ಸಾಕ್ಷಿದಾರರ ಸಹಿಃ